ದಿಃ 24-07-2019 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಬಿ ಡಿ ಎಸ್ ವಕೀಲರಿಂದಃ ವಾದಿ ಪರವಾಗಿ

ನನ್ನ ಹೆಚ್ಚುವರಿ ತಕರಾರನ್ನು ನಾನೇ ಹೇಳಿ ಬರೆಸಿದ್ದೇನೆ. ನಾನು ಸ್ವಾಧೀನದಲ್ಲಿದ್ದೇನೆ ಎಂದು ಹೇಳುತ್ತಿರುವ 1 ಎಕರೆ ಜಾಗದ ಸ್ವಾಧೀನಕೋರಿ ಈ ದಾವೆ ಹೂಡಲಾಗಿದೆ ಎಂದರೆ ಸರಿ. ನಾನು ಆರ್ ಸಿ ಸಿ ಮನೆ ಕಟ್ಟಿ ಈಗ್ಗೆ 4-5 ವರ್ಷಗಳಾಯಿತು. ವಾದಿ ದಾವೆ ಹೂಡುವ ಸಂದರ್ಭದಲ್ಲಿ ನಾನು ಶೀಟ್ ಹಾಕಿದ ಮನೆಯಲ್ಲಿದ್ದೆ. ಈಗ ಅದೇ ಜಾಗದಲ್ಲಿ ಆರ್ ಸಿ ಸಿ ಮನೆ ಕಟ್ಟಿ ದ್ದೇನೆ. ಮನೆಯನ್ನು ದಾವೆ ವಿಚಾರಣೆಯಲ್ಲಿರುವಾಗ ಕಟ್ಟಿದ್ದೇನೆ. ದಿಃ 12-07-2011 ರಂದು ವಾದಿಯಿಂದ ಸ್ವಾಧೀನಪಡಿಸಿಕೊಂಡಿರುವ ದಾವಾ ಬಿ ಷೆಡ್ಯೂಲ್ ನಲ್ಲಿ ಮನೆ ಕಟ್ಟಿಕೊಂಡಿದ್ದೇನೆ ಎಂದರೆ ಸರಿ. ವಿಚಾರಣೆಯಲ್ಲಿರುವಾಗ ಮನೆ ಕಟ್ಟಿರುವ ಕಾರಣಸದರಿ ಮನೆ ನ್ಯಾಯಾಲಯದ ಆದೇಶದ ಪ್ರಕಾರ ತೆರವುಗೊಳಿಸಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಪ್ರಮಾಣಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್, ಆಲೂರು